ಮಾತುಕತೆ

# ಕಲ್ಪನೆ–ಸೃಜನಶೀಲತೆ ತಡೆಯುವ ಹಗೆಗಳು ಎಲ್ಲಾ ಕಾಲಕ್ಕೂ ಇರುತ್ತವೆ



ವಸುಧೇಂದ್ರ

ಭಾರತೀಯ ಆಂಗ್ಲ ಸಾಹಿತ್ಯದಲ್ಲಿ ಅತ್ಯಂತ ಮುಖ್ಯರಾದ ಜೆರ್ರಿ ಪಿಂಟೋ ಮುಂಬಯಿಯಲ್ಲಿ ನೆಲೆಸಿದ್ದಾರೆ. ಸಾಹಿತ್ಯ ಸಮಾರಂಭಗಳಲ್ಲಿ ಕಾಣಸಿಗುವ ಅವರ ಉತ್ಸಾಹ, ಲವಲವಿಕೆ, ಚೇತನವು ಎಲ್ಲರನ್ನೂ ಬೆರಗುಗೊಳಿಸುವಂತಹದ್ದು. ಕಾವ್ಯ, ಕಥನ, ಕಾದಂಬರಿ, ಪತ್ರಿಕಾ ಅಂಕಣಗಳು, ಜೀವನಚರಿತ್ರೆ, ಅನುವಾದ, ಮಕ್ಕಳ ಸಾಹಿತ್ಯ – ಹೀಗೆ ವಿವಿಧ ಪ್ರಕಾರಗಳಲ್ಲಿ ಅವರು ಪುಸ್ತಕಗಳನ್ನು ಬರೆದಿದ್ದಾರೆ. ಮರಾಠಿ ಮತ್ತು ಕೊಂಕಣಿ ಭಾಷೆಯ ಕೃತಿಗಳನ್ನು ಇಂಗ್ಲೀಷಿಗೆ ವಿಪುಲವಾಗಿ ಅನುವಾದ ಮಾಡಿದ್ದಾರೆ. ಭಾಷೆಯ ಮೇಲೆ ವಿಶೇಷ ಪ್ರೀತಿ ಹೊಂದಿರುವ ಅವರು, ಇಂಗ್ಲೀಷ್ ಅಲ್ಲದೆ ಇನ್ನೂ ಆರು ಭಾಷೆಗಳನ್ನು ಕಲಿತಿದ್ದಾರೆ.

ಅವರ ಕಾದಂಬರಿ ‘Em and the Big Hoom’ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು ಯೇಲ್ ವಿಶ್ವವಿದ್ಯಾಲಯದ ‘Windham-Campbell Prize’, ಅವರ ಮತ್ತೊಂದು ಕಾದಂಬರಿ ‘Murder in Mahim’ಗೆ Crossword ಬಹುಮಾನ ಬಂದಿದೆ. ಅವರು ಅನುವಾದಿಸಿದ ‘Cobalt Blue’, ‘When I Hid My Caste’, ‘Baluta’ ಕೃತಿಗಳು ಓದುಗರ ಮೆಚ್ಚುಗೆಯನ್ನು ಪಡೆದಿವೆ. ಮಕ್ಕಳಿಗಾಗಿ ಅವರು ಬರೆದ ಪುಸ್ತಕಗಳೂ ಮಹತ್ವದ್ದಾಗಿವೆ. ಇತ್ತೀಚೆಗೆ ಅವರು ಮೈಸೂರಿನಲ್ಲಿ ಮಾತಿಗೆ ಸಿಕ್ಕಾಗ ಸಾಹಿತ್ಯ ಲೋಕದ ಕುರಿತು, ತಮ್ಮ ಅನಿಸಿಕೆ ವಿಚಾರಗಳನ್ನು ಹಂಚಿಕೊಂಡರು.

ಚಿತ್ರಗಳು: ಅನೂಪ್ ರಾಘ ಟಿ.